ನಂ.1 ವಿಜಯವಾಣಿ

ಕನ್ನಡದ ನಂ.1 ದಿನಪತ್ರಿಕೆ

# ಸಾಧನೆಗೆ ಬೇಕು ನಿರಂತರ ಪ್ರಯತ್ನ




- ದಿಲೀಪಕುಮಾರ ತಾಳಂಪಳ್ಳಿ ಸಲಹೆ
- ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯಕ್ರಮ

ಇಂದಿನ ವಿಜಯವಾಣಿ ಓದಿ...

ಪ್ರತಿಗಳಿಗಾಗಿ ಸಂಪರ್ಕಿಸಿ: ಕಲಬುರಗಿ: 8884432424, ಯಾದಗಿರಿ: 8884432204, ಬೀದರ್: 8884432413

ಪ್ರಜಾವಾಣಿ

# ‘ಆತ್ಮಸ್ಥೈರ್ಯದಿಂದ ಉತ್ತಮ ಸಾಧನೆ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ಪ್ರಬಲ ಆತ್ಮಸ್ಥೈರ್ಯದಿಂದ ಮಾತ್ರ ಉತ್ತಮ ಸಾಧನೆ ತೋರಬಹುದು’ ಎಂದು ಬಿಇಟಿ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಹೇಳಿದರು.

ನಗರದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜೀವನದಲ್ಲಿ ಗುರಿ ಇಟ್ಟುಕೊಳ್ಳಬೇಕು. ಸತತವಾಗಿ ಶ್ರಮಿಸಿ ಪ್ರತಿ ಹಂತದಲ್ಲೂ ಯಶಸ್ಸು ಗಳಿಸಬೇಕು. ಹೊಸ ಹೊಸ ವಿಷಯಗಳನ್ನು ಕಲಿತು ನವೀನವಾದುದನ್ನು ಸಂಶೋಧಿಸಬೇಕು. ಬರೀ ನೌಕರಿ ಪಡೆಯುವುದೇ ಜೀವನದ ಉದ್ದೇಶ ಆಗಬಾರದು. ಕಾಲೇಜಿನಲ್ಲಿ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದ್ದು ಅವುಗಳ ಉಪಯೋಗ ಪಡೆಯಬೇಕು’ ಎಂದರು.

ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ತಾಳಂಪಳ್ಳಿ ಮಾತನಾಡಿ, ‘ಸ್ಪರ್ಧಾತ್ಮಕ ಯುಗದಲ್ಲಿ ಅತಿ ಹೆಚ್ಚು ಅಂಕ ಪಡೆದರೆ ಮಾತ್ರ ಉನ್ನತ ಹುದ್ದೆ ಸಿಗಬಹುದು. ಅಧ್ಯಯನದ ಕಡೆ ಅಧಿಕ ಗಮನವಿರಲಿ’ ಎಂದರು.

ಪ್ರಾಚಾರ್ಯ ಅಶೋಕಕುಮಾರ ವಣಗೇರಿ ಮಾತನಾಡಿ, ‘ಉತ್ತಮ ಶಿಕ್ಷಣ ಪಡೆದರೆ ಮಾತ್ರ ಭವಿಷ್ಯ ಉಜ್ವಲವಾಗುತ್ತದೆ’ ಎಂದರು.

ಕಾಲೇಜಿನ ರಜಿಸ್ಟ್ರಾರ್ ಪ್ರೇಮಸಾಗರ ಪಾಟೀಲ, ಉಪಪ್ರಾಚಾರ್ಯ ಅರುಣಕುಮಾರ ಯಲಾಲ್, ವಿದ್ಯಾಸಾಗರ ಮೂಲಗೆ, ಆರ್. ಬಿ.ಡಿಗ್ಗಿಕರ್ ಮಾತನಾಡಿದರು.




ಬಸವಕಲ್ಯಾಣದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ನಡೆದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಆಡಳಿತ ಮಂಡಳಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು

[redacted]

# ಮನೋಬಲದಿಂದ ಯಶಸ್ಸು ಸಾಧ್ಯ

■ **ವಿಕ ಸುದ್ದಿಲೋಕ** ಬಸವಕಲ್ಯಾಣ



**ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಅಧ್ಯಕ್ಷ ದೀಲಿಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು.**

ವಿದ್ಯಾರ್ಥಿಗಳಲ್ಲಿ ಮನೋಬಲ-ಆತ್ಮಬಲ ಇದ್ದಾಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಬಸವಕಲ್ಯಾಣ ಎಂ ಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ದೀಲಿಪಕುಮಾರ ತಾಳಂಪಳ್ಳಿ ಅಭಿಪ್ರಾಯಪಟ್ಟರು.

ನಗರದ ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯ ಕ್ರಮ ಉದ್ಘಾಟಿಸಿ ಮಾತನಾಡಿದರು. ಸಾಧನೆಗೆ ನಿರಂತರ ಪ್ರಯತ್ನ ಮತ್ತು ಕಠಿಣ ಪರಿಶ್ರಮ ಅಗತ್ಯವಿದೆ. ಕಾಲೇಜಿನಲ್ಲಿರುವ ಉ ತ್ತಮ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಗಲಿರುಳು ಗುಣಮಟ್ಟದ ವಿದ್ಯಾಭ್ಯಾಸ ಮಾಡಿ ಉತ್ತಮ ಫಲಿತಾಂಶದಿಂದ ಪಾಸಾಗುವ ಮೂಲಕ ಮನೆತನದ ಎಲ್ಲ ಸದಸ್ಯರು ನಿಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ಪಾತ್ರರಾಗಬೇಕು. ವಿದ್ಯೆ ಜತೆಗೆ ಆಧುನಿಕ ಯುಗದಲ್ಲಿ ಸಂಸ್ಕಾರವೂ ಮುಖ್ಯ ಎಂದರು.

ಕಾಲೇಜಿನ ಆಡಳಿತ ಮಂಡಳಿಯ ಸದಸ್ಯೆ ಮಲ್ಲಮ್ಮಾ ಎಂ.ತಾಳಂಪಳ್ಳಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಡೀ ದೇಶದಲ್ಲಿ 15 ಲಕ್ಷಕ್ಕಿಂತ ಹೆಚ್ಚು ಹಾಗೂ ರಾಜ್ಯದಲ್ಲಿ 1.5 ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ ಮುಗಿಸಿ ದ್ದಾರೆ. ಅವರ ಜತೆ ತಮ್ಮೆಲ್ಲರ ಸ್ಪರ್ಧೆ ಇದೆ. ಅದಕ್ಕಾಗಿ ಉತ್ತಮ ಅಭ್ಯಾಸ ಮಾಡಿ, ಅಗ್ರಶ್ರೇಣಿಯಲ್ಲಿ ಪಾಸಾಗಬೇಕು ಎಂದು ಸಲಹೆ ನೀಡಿದರು. ಕಾಲೇಜಿನ ಪ್ರಾಚಾರ್ಯ ಡಾ. ಅಶೋಕಕುಮಾರ ವಣಗೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಲೇಜಿನ ರಜಿಸ್ಟ್ರಾರ್ ಪ್ರೇಮಸಾಗರ ಪಾಟೀಲ್, ಉಪಪ್ರಾಚಾರ್ಯ ಡಾ.ಅರುಣಕುಮಾರ ಯಲಾಲ ಸ್ವಾಗತಿಸಿದರು. ವಿದ್ಯಾ ಸಾಗರ ನಿರೂಪಿಸಿದರು. ಆರ್.ಬಿ.ಡಿಗ್ಗೀಗಕರ್ ವಂದಿಸಿದರು.

...ತ್ತಿರ ಕೇಳಿರುವ 500 ಕೋಟಿ ರೂ. ಅನುದಾನ ...ಲ್ಲೆಯ ರೈತರಿಗೆ ತಲುಪುವಂತೆ ಮಾಡಬೇಕು. ...ರ್ಕಾರದಿಂದ 100 ಕೋಟಿ ರೂ. ವಿಶೇಷ

...ಟಂಕಸಾಲೆ, ಮನೋಹರ ಪಾಟೀಲ, ಬಾಲಾಜಿ ರೋಡೆ, ಮಾದಪ್ಪ ದೇಶಮುಖ, ಶರದ ಪಾಟೀಲ, ರವಿಶಂಕರ ಶೇರಿಕಾರ ಡೊಣಗಾಪುರ ಇತರರಿದ್ದರು.

70928 77888,
ಕನ್ನಡಿಗರ ನಂ.1 ಆಯ್ಕೆ, 25 ವರ್ಷಗಳಿಂದ

### ದಿಲೀಪಕುಮಾರ ತಾಳಂಪಳ್ಳಿ ಸಲಹೆ | ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯಕ್ರಮ

# ಸಾಧನೆಗೆ ಬೇಕು ನಿರಂತರ ಪ್ರಯತ್ನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಾಧಿಸುವ ಛಲ, ನಿರಂತರ ಪ್ರಯತ್ನ, ಮನೋಬಲ ಹಾಗೂ ಆತ್ಮಬಲ ಇದ್ದಾಗ ಮಾತ್ರ ಜೀವನದಲ್ಲಿ ಏನಾದರೂ ಸಾಧಿಸಲು ಸಾಧ್ಯ ಎಂದು ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಹೇಳಿದರು.

ನಗರದ ಹೊರವಲಯದಲ್ಲಿನ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಆಯೋಜಿಲಾಗಿದ್ದ 2025-26ನೇ ಸಾಲಿಗೆ 1ನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸ್ವಾಗತ, ಪರಿಚಯ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣ ಕಲ್ಪಿಸುವುದು ಸಂಸ್ಥೆಯ ಮೂಲ ಆಶಯವಾಗಿದೆ ಎಂದರು.

ಸಮಯ ಹಾಗೂ ಇಲ್ಲಿಯ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಶ್ರಮ ವಹಿಸಿ ಅಭ್ಯಾಸ ಮಾಡುವ ಜತೆಗೆ ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಉತ್ತಮ ಫಲಿತಾಂಶ ತಮ್ಮದಾಗಿಸಿಕೊಳ್ಳುವ ಮೂಲಕ ಜೀವನದಲ್ಲಿ ಸಾಧನೆ ಮಾಡಬೇಕು. ಕಷ್ಟಪಟ್ಟು ಕಲಿಸಿದ ಮನೆಯವರ ವಿಶ್ವಾಸ ಉಳಿಸಿಕೊಳ್ಳಬೇಕು. ಕಲಿತ ಸಂಸ್ಥೆಗೆ ಹೆಸರು ತರುವ ಜೊತೆಗೆ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ಎಂ. ತಾಳಂಪಳ್ಳಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅವಕಾಶಗಳನ್ನು ಪಡೆಯಬೇಕಾದರೆ




ಬಸವಕಲ್ಯಾಣದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ ವಿದ್ಯಾರ್ಥಿಗಳ ಸ್ವಾಗತ, ಪರಿಚಯ ಸಮಾರಂಭವನ್ನು ಕಾಲೇಜು ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು. ಮಲ್ಲಮ್ಮ ಎಂ. ತಾಳಂಪಳ್ಳಿ, ಡಾ.ಅಶೋಕಕುಮಾರ ವಣಗೇರಿ, ಡಾ.ಅರುಣಕುಮಾರ ಯಲಾಲ್, ಪ್ರೇಮಸಾಗರ ಪಾಟೀಲ್ ಇದ್ದರು.

ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಬೇಕು. ಶ್ರಮವಹಿಸಿ ಅಭ್ಯಾಸ ಮಾಡಬೇಕು. ಉತ್ತಮ ಫಲಿತಾಂಶ ಪಡೆಯುವ ಜೊತೆಗೆ ಸ್ಪರ್ಧಾತ್ಮಕ ಪರಿಸ್ಥಿತಿ ಎದುರಿಸಲು ಸಿದ್ಧರಾಗಬೇಕು ಎಂದು ಸಲಹೆ ನೀಡಿದರು.

ಪ್ರಾಚಾರ್ಯ ಡಾ.ಅಶೋಕಕುಮಾರ ವಣಗೇರಿ ಮಾತನಾಡಿ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಜೀವನದಲ್ಲಿ ಮುನ್ನುಗ್ಗಬೇಕಾಗಿದ್ದು, ಉಜ್ವಲ ಭವಿಷ್ಯಕ್ಕಾಗಿ ಕಠಿಣ ಶ್ರಮ ಪಡಬೇಕು. ಸಾಧಿಸುವ ಹಂಬಲ, ಸಾಧನೆಗೆ ಪೂರಕವಾದ ಕಠಿಣ ಪರಿಶ್ರಮ ಅವಶ್ಯಕ ಎಂದರು.

ಪ್ರೇಮಸಾಗರ ಪಾಟೀಲ್ ಇತರರಿದ್ದರು. ಉಪ ಪ್ರಾಚಾರ್ಯ ಡಾ.ಅರಣಕುಮಾರ ಯಲಾಲ್ ಸ್ವಾಗತಿಸಿದರು. ವಿದ್ಯಾಸಾಗರ ನಿರೂಪಣೆ ಮಾಡಿದರು. ಆರ್.ಬಿ. ಡಿಗ್ಗಿಕರ್ ವಂದಿಸಿದರು.

## ...ವಾಡಿ (ಯು)ಯಲ್ಲಿ ಕಳಸಾರೋಹಣ ಸಮಾರಂಭ

## ಅಲ್ಲಮಪ್ರಭು ಸಂಘ ಮಹಾಸಭೆ 15ರಂದು